# ಸಿಂಪಲ್ ಸುನಿ 'ಗತವೈಭವ'ದ ಮೆಲುಕು



ಇದೇ ಫೆಬ್ರುವರಿಯಲ್ಲಿ ಬಿಡುಗಡೆಗೊಂಡಿದ್ದ 'ಒಂದು ಸರಳ ಪ್ರೇಮಕಥೆ' ನಂತರ ನಿರ್ದೇಶಕ ಸಿಂಪಲ್ ಸುನಿ ಹಲವು ಸಿನಿಮಾಗಳಲ್ಲಿ ತೊಡಗಿಕೊಂಡಿದ್ದು, ಅವರ ನಿರ್ದೇಶನದ ಮತ್ತೊಂದು ಸಿನಿಮಾ ತೆರೆಗೆ ಬರಲು ಸಜ್ಜಾಗಿದೆ.

ಆಶಿಕಾ ರಂಗನಾಥ್ ನಟಿಸಿರುವ, ನಾಯಕ ನಟನಾಗಿ ದುಷ್ಯಂತ್ ಪರಿಚಿತಗೊಳ್ಳುತ್ತಿರುವ 'ಗತವೈಭವ' ಸಿನಿಮಾ ನವೆಂಬರ್ 14ರಂದು ಬಿಡುಗಡೆಯಾಗುತ್ತಿದೆ.

ಈ ಸಿನಿಮಾ ತಮಗೆ ವಿಶೇಷ ಅನುಭವ ನೀಡಿರುವುದಾಗಿ ಹೇಳಿರುವ ಸಿಂಪಲ್ ಸುನಿ, ಇದು ತಮ್ಮ ನಿರ್ದೇಶನದಲ್ಲಿ ಮೂಡಿಬರುತ್ತಿರುವ ಮೊದಲ ಫ್ಯಾಂಟಸಿ ಚಿತ್ರ ಎಂದಿದ್ದಾರೆ.

''ಗತವೈಭವ', ಒಂದರಲ್ಲೇ ನಾಲ್ಕು ಸಿನಿಮಾಗಳನ್ನು ಮಾಡಿದಂಥ ಅನುಭವ ನೀಡಿತು. ಈ ಸಿನಿಮಾವನ್ನು ನಾನು ತುಂಬಾ ಗಂಭೀರವಾಗಿ ಪರಿಗಣಿಸಿದ್ದೆ. ನನ್ನದೇ ಬ್ಯಾನರ್‌ನಲ್ಲಿ ಸಿನಿಮಾ ಹೊರತರಬೇಕೆಂದು ಬಯಸಿದ್ದೆ. ನಾನು ಹೇಗೆ ಆಲೋಚಿಸಿದ್ದೆನೋ, ಹೇಗೆ ಚಿತ್ರಣ ಕಟ್ಟಿಕೊಂಡಿದ್ದೆನೋ ಹಾಗೇ ಸಿನಿಮಾ ಮೂಡಿಬಂದಿದೆ. ಕೆಲವು ಸಿನಿಮಾಗಳನ್ನು ಬಿಡುಗಡೆಗೆ ಮುನ್ನ ಪ್ರಚಾರ ಮಾಡಬೇಕಾಗುತ್ತದೆ. ಆದರೆ ಈ ಸಿನಿಮಾ ಪ್ರೇಕ್ಷಕರಿಂದ ತನ್ನಿಂದ ತಾನೇ ಪ್ರಚಾರಗೊಳ್ಳುತ್ತದೆ. ಚಿತ್ರದ ಪ್ರತಿ ಫ್ರೇಮ್ ಕೂಡ ಸುಂದರವಾಗಿ ಮೂಡಿಬಂದಿದೆ'' ಎಂದು ವಿವರಿಸಿದ್ದಾರೆ.



ಸಿಂಪಲ್ ಸುನಿ

''ಪ್ರೇಕ್ಷಕ ಬಯಸುವ ಮನರಂಜನೆ, ಭಾವನೆಗಳೆಲ್ಲವನ್ನೂ ಈ ಸಿನಿಮಾ ಒಳಗೊಂಡಿದೆ. ಒಂದಕ್ಕೊಂದು ತಳುಕು ಹಾಕಿಕೊಂಡ ನಾಲ್ಕು ಕಥಾವಸ್ತುಗಳನ್ನು 'ಗತವೈಭವ' ಹೊಂದಿದೆ. ಭೂತಕಾಲ ವಾಸ್ತವದ ನಡುವೆ ಕಥೆ ಸಾಗುತ್ತದೆ. ಇದೊಂದು ಪೀರಿಯಡ್ ಡ್ರಾಮಾ. ಕನ್ನಡದಲ್ಲಿ ಒಂದು ವಿಭಿನ್ನ ಪ್ರಯತ್ನ ಮಾಡಬೇಕು ಎಂದು ಬಹಳ ದಿನಗಳಿಂದ ಅಂದುಕೊಂಡಿದ್ದೆ. ಅದು ಈ ಸಿನಿಮಾ ಮೂಲಕ ಸಾಧ್ಯವಾಗಿದೆ'' ಎಂದು ಮಾಹಿತಿ ಹಂಚಿಕೊಂಡಿದ್ದಾರೆ.

ಸಿನಿಮಾ ಕುರಿತು ಮಾತನಾಡಿರುವ ಆಶಿಕಾ, ''ಗತವೈಭವ' ನನ್ನ ಪಾಲಿಗೆ ತುಂಬಾ ವಿಶಿಷ್ಟ ಸಿನಿಮಾ. ಇದರಲ್ಲಿ ನನಗೆ ನಾಲ್ಕು ಲುಕ್ ಇದೆ. ಈ ತಂಡದೊಂದಿಗೆ ಕೆಲಸ ಮಾಡಿದ್ದು ಅತ್ಯುತ್ತಮ ಅನುಭವ' ಎಂದು ಸಂತಸದಿಂದ ಹೇಳಿಕೊಂಡಿದ್ದಾರೆ.

ಸದ್ಯ ಸಿಂಪಲ್ ಸುನಿ ನಿರ್ದೇಶನದ 'ದೇವರು ರುಜು ಮಾಡಿದನು' ಸಿನಿಮಾ ಬಿಡುಗಡೆ ಹಾದಿಯಲ್ಲಿದೆ. 'ರಿಚಿ ರಿಚ್' ಕೂಡ ಸುನಿ ಸಾರಥ್ಯದಲ್ಲಿ ಸಾಗುತ್ತಿದೆ.

# ಚಂದನವನದಲ್ಲಿ ಸಂಚಿತ್ ಮೊಹರು



ನಟ ಸುದೀಪ್ ಅಕ್ಕನ ಮಗ ಸಂಚಿತ್ ಸಂಜೀವ್ ಸಿನಿಮಾರಂಗಕ್ಕೆ ಎಂಟ್ರಿ ಕೊಟ್ಟಿದ್ದು, 'ಮ್ಯಾಂಗೊ ಪಚ್ಚ' ಮೂಲಕ ಚಂದನವನದಲ್ಲಿ ಸದ್ದು ಮಾಡಲು ಅಣಿಯಾಗಿದ್ದಾರೆ.

ಸಿನಿಮಾರಂಗದಲ್ಲಿ ತಮ್ಮ ಮೊದಲ ಹೆಜ್ಜೆಯ ಕುರಿತು ಸಂದರ್ಶನವೊಂದರಲ್ಲಿ ಮಾತನಾಡಿರುವ ಸಂಚಿತ್, ''ಮ್ಯಾಂಗೊ ಪಚ್ಚಾ' ಸಿನಿಮಾದಲ್ಲಿ ನಟಿಸಿದ್ದು ನನಗೆ ದೊಡ್ಡ ಅನುಭವ ನೀಡಿತು. ಕಲಿಕೆಗೆ ಒಂದು ವೇದಿಕೆಯಾಯಿತು. ಇದು ನನ್ನ ಮೊದಲ ಸಿನಿಮಾ. ಸಹಜವಾಗಿಯೇ ಸ್ವಲ್ಪ ನರ್ವಸ್ ಆಗಿದ್ದೆ. ಆದರೆ ಚಿತ್ರತಂಡದ ಬೆಂಬಲ ಎಲ್ಲವನ್ನೂ ಸುಲಲಿತಗೊಳಿಸಿತು'' ಎಂದಿದ್ದಾರೆ.

'ಸಿನಿಮಾ ಕುರಿತು ಬಹಳ ಉತ್ಸುಕನಾಗಿದ್ದೇನೆ. ಇದು ನನ್ನ ಮೊದಲ ಹೆಜ್ಜೆ ಎಂಬುದನ್ನೂ ನೆನಪಿಟ್ಟುಕೊಂಡಿದ್ದೇನೆ. ಸಿನಿಮಾರಂಗದಿಂದ ನನಗೆ ಸಿಕ್ಕಿರುವ ಬೆಂಬಲ ಊಹೆಗೂ ಮೀರಿದ್ದು. ಮೊದಲ ದಿನದಿಂದಲೂ ದೀಪು ಮಾಮ (ಸುದೀಪ್) ನನಗೆ, ಈ ಸಿನಿಮಾಗೆ ಬೆಂಬಲವಾಗಿ ನಿಂತಿದ್ದಾರೆ. ಕಥೆಗೆ ಅವರು ನೀಡಿದ ಹೊಳಹುಗಳು ಸಿನಿಮಾಗೆ ಹೊಸ ದೃಷ್ಟಿಕೋನವನ್ನೇ ನೀಡಿದವು' ಎಂದು ಮೆಲುಕು ಹಾಕಿದ್ದಾರೆ.

ಕ್ರೈಂ ಥ್ರಿಲ್ಲರ್ ಜಾನರ್ ಸಿನಿಮಾ ಇದಾಗಿದ್ದು, ಬಹುತೇಕ ಚಿತ್ರೀಕರಣವನ್ನು ಮೈಸೂರಿನಲ್ಲೇ ನಡೆಸಲಾಗಿದೆ. ಮೈಸೂರಿನ ಚೆಲುವನ್ನೂ ವರ್ಣಿಸಿರುವ ಸಂಚಿತ್, 'ಎಲ್ಲರಿಗೂ ಸುಲಭವಾಗಿ ಕಾಣದಂಥ ಮೈಸೂರಿನ ಮತ್ತೊಂದು ಮಗ್ಗುಲನ್ನು ನಾನು ನೋಡಿದೆ. ಒಬ್ಬ ಟ್ರಾವೆಲರ್ ಆಗಿ ನನಗದು ಬಹಳ ಶ್ರೀಮಂತ ಅನುಭವ' ಎಂದಿದ್ದಾರೆ.

ವಿವೇಕ್ ನಿರ್ದೇಶನದಲ್ಲಿ ಮೂಡಿಬರುತ್ತಿರುವ ಈ ಸಿನಿಮಾದಲ್ಲಿ 2001ರಿಂದ 2011ರ ಅವಧಿಯಲ್ಲಿ ಮೈಸೂರಿನಲ್ಲಿ ನಡೆದ ಪ್ರಮುಖ ಘಟನೆಗಳಿವೆ ಎಂದಿದೆ ಚಿತ್ರತಂಡ. ನಾಯಕಿಯಾಗಿ ಕಾಜಲ್ ಕುಂದರ್ ಬಣ್ಣಹಚ್ಚಿದ್ದಾರೆ. ಚಿತ್ರಕ್ಕೆ ಚರಣ್ ರಾಜ್ ಸಂಗೀತ, ಶೇಖರ್ ಚಂದ್ರ ಸಿನಿಮಾಟೊಗ್ರಫಿ ಇದೆ.